ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/99/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| **ಶ್ರೀ.1)ಬಿ ರಾಮನಗೌಡ ತಂದೆ ಲೇಟ್ ಕೊಟ್ರಗೌಡ<br>2)ಬಿ ಚನ್ನಬಸವನಗೌಡ ತಂದೆ ಲೇಟ್ ಕೊಟ್ರಗೌಡ<br>3)ಬಿ ಭುವನೇಶ್ವರ ತಂದೆ ಲೇಟ್ ಕೊಟ್ರಗೌಡ<br>4)ಬಿ ಜಯನಗೌಡ ತಂದೆ ಲೇಟ್ ಕೊಟ್ರಗೌಡ<br>5)ಬಿ ಜಂಬನಗೌಡ ತಂದೆ ಲೇಟ್ ಕೊಟ್ರಗೌಡ<br>6)ಬಿ ಪ್ರಕಾಶ ತಂದೆ ಲೇಟ್ ಕೊಟ್ರಗೌಡ<br>7)ಬಿ ನಾಗಪ್ಪ ತಂದೆ ಲೇಟ್ ಕೊಟ್ರಗೌಡ<br>ಇಟಗಿ** | **ಕಂದಾಯ ನೀರೀಕ್ಷಕರು ಇಟಗಿ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಇಟಗಿ | 141/B | 4.34 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನಿಗೆ ಸಂಬಂದಿಸಿದಂತೆ ಶ್ರೀ ಬಿ ಚನ್ನಬಸನಗೌಡ ತಂದೆ ಲೇಟ್ ಕೊಟ್ರಗೌಡ ಇಟಗಿ ಇವರು ದಿನಾಂಕ 24/12/2014 ರಂದು ನೊಂದಾಯಿತವಲ್ಲದ ಪಾಲುವಿಭಾಗ ಪತ್ರ ಮತ್ತು 11 ಇ ನಕಾಶೆಯೊಂದಿಗೆ ಅರ್ಜಿ ಸಲ್ಲಿಸಿ ಮೇರೆಗೆ ಎಂ ಆರ್ ಸಂಖ್ಯೆ ಹೆಚ್94/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಯಾರಿಂದಲು ತಕರಾರು ಬಂದಿರುವುದಿಲ್ಲ.ಆದರೆ ಪಾಲು ವಿಭಾಗದ ದಸ್ತಾವೇಜಿನಲ್ಲಿ ಕಾಣಿಸಿದ ವಿಸ್ತೀರ್ಣಕ್ಕು ಮತ್ತು 11ಇ ನಕಾಶೆ ವಿಸ್ತೀರ್ಣಕ್ಕು ವ್ಯತ್ಯಾಸವಿದ್ದು ತಾಳೆ ಹೊಂದದ ಕಾರಣ ಕಂದಾಯ ನೀರೀಕ್ಷಕರು ಇಟಗಿ ಇವರು ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 09/07/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಅಂತಿಮಗೊಳಿಸಲಾಯಿತು. ವಿಚಾರಣೆಗೆ ವಾದಿಗಳು ಹಾಜರಾಗಿರುತ್ತಾರೆ.ಆದರೆ ಸರಕಾರಿ ಆದೇಶ ಸಂಖ್ಯೆ ದಿನಾಂಕ ಮೇರೆಗೆ ನೊಂದಾಯಿತವಲ್ಲದ ಪಾಲುವಿಭಾಗದ ದಸ್ತಾವೇಜನ್ನು ಪರಿಗಣಿಸಿ ಹಕ್ಕು ಬದಲಾವಣೆ ಮಾಡಬಾರದೆಂಬ ನಿರ್ದೇಶನ ಇರುವ ಕಾರಣ ಈ ಕೆಳಕಂಡ

## ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ಸರಕಾರಿ ಆದೇಶ ಸಂಖ್ಯೆ ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶ ಸಂಖ್ಯೆ 2002(4) ಕೆ ಸಿ ಸಿ ಆರ್ 2285ರ ಪ್ರಕಾರ ಮೇರೆಗೆ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸುತ್ತಾ ವಾದಿಗಳಿಗೆ ಪಾಲುವಿಭಾಗದ ದಸ್ತಾವೇಜನ್ನು ನೊಂದಾಯಿಸಿಕೊಂಡು ಮತ್ತು 11ಇ ನಕಾಶೆಯನ್ನು ಪಾಲುವಿಭಾಗ ದಸ್ತಾವೇಜು ಪ್ರಕಾರ ಸರಿಪಡಿಸಿಕೊಂಡು ಮರು ಅರ್ಜಿ ಸಲ್ಲಿಸಲು ನಿರ್ದೇಶನ ನೀಡಿ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಇಟಗಿ | 141/B | 4.34 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು

ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.